Publication :- Andolana
Date :- 19-08-2016.
Page. No. :- 11

ಆಂದೋಲನ ೧೯.೦೮, ೨೦೧೬ ಮೈಸೂರು

## ೫ನೆಯ ಕರ್ನಾಟಕ ಪ್ರೀಮಿಯರ್ ಲೀಗ್ ಪಂದ್ಯಾವಳಿ

# ಮೈಸೂರು ವಾರಿಯರ್ಸ್ ಹೊಸ ತಂಡ ಪ್ರಕಟ

ಮೈಸೂರು,ಆ.೧೮– ೫ನೆಯ ಕಾರ್ಬನ್ ಸ್ಮಾರ್ಟ್ ಕೆಪಿಎಲ್ ಸರಣಿಗೆ ಎನ್‌ಆರ್ ಸಮೂಹ ಮತ್ತು ಸೈಕಲ್ ಪ್ಯೂರ್ ಅಗರಬತ್ತೀಸ್ ಪ್ರಾಯೋಜಕತ್ವದ ಮೈಸೂರು ವಾರಿಯರ್ಸ್ ತಂಡ ನೂತನ ಆಟಗಾರರ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಗುರುವಾರ ಬೆಂಗಳೂರಿನಲ್ಲಿ ನಡೆದ ಆಟಗಾರರ ಆಯ್ಕೆ ಪ್ರಕ್ರಿಯೆಯಲ್ಲಿ ೧೮ ಆಟಗಾರರನ್ನು ಮೈಸೂರು ವಾರಿಯರ್ಸ್ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

**ಆಟಗಾರರು:** ಮನೀಷ್ ಪಾಂಡೆ, ಜೆ.ಸುಜಿತ್, ಕೆ.ಗೌತಮ್, ಅರುಣ್ ಹೊಯ್ಸಳ, ಜೋನಾಥಾನ್, ಅನಿರುದ್ಧ್ ಜೋಷಿ, ಆದಿತ್ಯ ಎಸ್.ಸಾಗರ್, ರಾಜೋ ಭಕ್ತಾಳ್, ಲಿಯಾನ್ ಖಾನ್, ವೈಷಾಕ್ ವಿಜಯ ಕುಮಾರ್, ನಿಹಾಲ್ ಉಲ್ಲಾಳ್, ಅಭಿಷೇಕ್ ಭಟ್, ಅಕ್ಷಯ್, ಆನಂದ್ ದೊಡ್ಡಮನಿ, ಕುಶಾಲ್, ಆರ್. ಪ್ರತೀಕ್ಷ, ನಿಖಿತ್ ಎಸ್.ಸಂಘಲಾಲ್, ವಿ.ಕೌಶಿಕ್ ಆಯ್ಕೆಯಾಗಿದ್ದಾರೆ.

ಮುಖ್ಯ ತರಬೇತುದಾರರಾಗಿ ಮುರಳಿ, ಸಹಾಯಕ ತರಬೇತುದಾರರಾಗಿ ವಿಜಯ್ ಮಾಧ್ಯಾನ್ಕರ್, ಫಿಸಿಯೋ ಶರವಣ್, ಫಿಟ್‌ನೆಸ್ ತರಬೇತುದಾರರಾಗಿ ಶ್ಯಾವ್ ರಾವ್, ತಂಡದ ವ್ಯವಸ್ಥಾಪಕರಾಗಿ ಎಂ.ಆರ್.ಸುರೇಶ್, ಸಂಯೋಜಕರಾಗಿ ಅರುಣ್‌ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಹೊಸ ತಂಡದ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡ ಮೈಸೂರು ವಾರಿಯರ್ಸ್‌ನ ಮಾಲೀಕ ಮತ್ತು ಸೈಕಲ್ ಪ್ಯೂರ್ ಅಗರಬತ್ತೀಸ್‌ನ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ನಮ್ಮ ಹೊಸ ತಂಡವು ಹೊಸ ಪ್ರತಿಭೆಗಳನ್ನು ಮತ್ತು ಅನುಭವಿ ಆಟಗಾರರನ್ನು ಒಳಗೊಂಡ ಸಶಕ್ತ ತಂಡವಾಗಿದೆ. ೫ನೆಯ ಪಂದ್ಯಾವಳಿಯಲ್ಲಿ ನಮ್ಮ ತಂಡವು ಉತ್ತಮವಾಗಿ ಸೆಣಸಾಟ ನಡೆಸಲಿದೆ ಎಂಬ ವಿಶ್ವಾಸವಿದೆ ಎಂದರು.




ಬೆಂಗಳೂರಿನಲ್ಲಿ ಗುರುವಾರ ನಡೆದ ಕೆಪಿಎಲ್ ಲೀಗ್‌ನ ೫ನೆಯ ಆವೃತ್ತಿಯ ಆಟಗಾರರ ಹರಾಜಿನಲ್ಲಿ ಪಾಲ್ಗೊಂಡಿದ್ದ ಮೈಸೂರು ವಾರಿಯರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

> ಕ್ರಿಕೆಟ್ ಆಟಕ್ಕೆ ಅತ್ಯುತ್ತಮ ಆಟಗಾರರನ್ನು ನೀಡುವಲ್ಲಿ ಸೈಕಲ್ ಪ್ಯೂರ್ ಬದ್ಧವಾಗಿದೆ. ಮೈಸೂರು ವಾರಿಯರ್ಸ್ ಮುಂಬರುವ ಕೆಲವು ವರ್ಷಗಳಲ್ಲಿ ಕೆಲವರಾದರೂ ಆಟಗಾರರನ್ನು ಅನ್ವೇಷಿಸುವ ಮೂಲಕ ಅವರಿಗೆ ವೃತ್ತಿಪರ ತರಬೇತಿ ನೀಡಿ ರಾಷ್ಟ್ರೀಯ ಆಟದಲ್ಲಿ ಆಡುವಂತೆ ಮಾಡಲಾಗುವುದು. ಕ್ರಿಕೆಟ್ ಮತ್ತು ಆಟಗಾರರ ಪ್ರಗತಿಗಾಗಿ ಕೆಲಸ ಮಾಡುವ ಗುರಿ ಇಟ್ಟುಕೊಂಡಿದ್ದೇವೆ
> –ಅರ್ಜುನ್ ರಂಗ